ದಿನಾಂಕಃ 13-02-2024 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎಸ್. ಬಿ. ಎಂ. ವಕೀಲರಿಂದ

1. ನಾನು ಪದವಿಧರ. ನಾನು 2007 ರ ತಯಾರಿಕಾ ವರ್ಷದ ಹಳೆಯ ಕಾರನ್ನು 2013 ರಲ್ಲಿ ಖರೀದಿಸಿರುತ್ತೇನೆ. ನಾನು ಕಾರನ್ನು ಖರೀದಿಸಿದ ಆರು ತಿಂಗಳಲ್ಲಿ ಅಪಘಾತ ಆಯಿತು. ನಾನು ಕಾರನ್ನು ಬಾಡಿಗೆಯ ಸಂಘಕ್ಕೆ ನೋಂದಾಯಿತ ಸದಸ್ಯನಾಗಿಲ್ಲ. ಆ ಸಮಯದಲ್ಲಿ ಕಾರ್ ಚಲಾಯಿಸುತ್ತಿದ್ದ ಚಾಲಕರ ಹೆಸರು ಮರೆತು ಹೋಗಿದೆ. ಅವರು 2 ತಿಂಗಳು ಕೆಲಸ ಮಾಡಿದರು. ಕಾರ್ ಚಾಲಕ ಅಪಘಾತದಲ್ಲಿ ಮೃತಪಟ್ಟಿದ್ದು ಅವರ ಚಾಲನಾ ಪರವಾನಿಗೆಯನ್ನು ಹಾಜರು ಪಡಿಸಿ ಪರಿಹಾರ ಪಡೆದಿರುತ್ತಾರೆ. ಸದರಿ ಪರಿಹಾರ ಪ್ರಕರಣದ ನಂಬರ್ ಗೊತ್ತಿಲ್ಲ. ಕಾರ್ ಚಾಲಕನಿಗೆ ಸಂಬಳ ಕೊಡುತ್ತಿದ್ದ ಬಗ್ಗೆ ದಾಖಲೆಗಳನ್ನು ಇಟ್ಟುಕೊಂಡಿಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಆರ್.ಟಿ.ಓ. ರವರು ಸರ್ವೆ ಮಾಡಿಲ್ಲ. ಅಪಘಾತ ಸಮಯದಲ್ಲಿ ನನ್ನ ಕಾರಿಗೆ ಫ್ಯೂಚರ್ ಜನರಲ್ ಇನ್ಶೂರನ್ಸ್ ಕಂಪನಿಯ ವಿಮೆ ಚಾಲ್ತಿಯಲ್ಲಿ ಇತ್ತು. ಆ ಸಮಯದಲ್ಲಿ ಕಾರ್ ಗೆ ಎಷ್ಟು ಮೌಲ್ಯ ನಿಗದಿ ಮಾಡಿದ್ದರು ಎಂದು ನೆನಪಿಲ್ಲ. ನಾನು ಕಂಪನಿಯಿಂದ ಪರಿಹಾರ ಪಡೆದಿಲ್ಲ. ಈ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ.

2. ಕಾರ್ ಬಿಡಿಭಾಗಗಳನ್ನು ಮಂಡ್ಯದಲ್ಲಿ ಖರೀದಿಸಿರುತ್ತೇನೆ. ಸಾಗರ್ ಮೋಟರ್ಸ್ ರವರು ನನಗೆ ಪರಿಚಯ ಇಲ್ಲ. ಬಿಲ್ ಗಳೆಲ್ಲ ಕೈಬರವಣಿಗೆಯಲ್ಲಿ ಇವೆ ಎನ್ನುವುದು ಸರಿ. ನಾನು ಜಿ.ಎಸ್.ಟಿ. ಬಿಲ್ ಗಳನ್ನೇ ಹಾಜರು ಪಡಿಸಿರುತ್ತೇನೆ. ಬಿಲ್ ಗಳನ್ನು ಪರಿಹಾರ ಪಡೆಯಲು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಅವುಗಳೆಲ್ಲ ಮೂಲ ಬಿಲ್ ಗಳೇ ಆಗಿರುತ್ತವೆ. ನನ್ನ ಕಾರ್ ರಿಪೇರಿಗೆ ನಾನು ಹಾಜರು ಪಡಿಸಿರುವ ರಸೀದಿಗಳಷ್ಟು ಹಣ ವೆಚ್ಚವಾಗಿಲ್ಲ ಎಂದರೆ ಸರಿಯಲ್ಲ. ಕಾರ್ ರಿಪೇರಿ ಮಾಡಿದವರು ಬೆಳ್ಳೂರ್ ಕ್ರಾಸ್‌ದವರು. ಅವರಿಗೆ ವಿಚಾರಣೆ ಮಾಡಲು ತೊಂದರೆ ಇಲ್ಲ. ಕಾರಿನ ಚಾಲಕನಿಗೆ ತಿಂಗಳಿಗೆ ರೂ.10,000/- ಸಂಬಳ ಕೊಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲಕನಿಗೆ ಸಂಬಳ ಕೊಟ್ಟ ಬಗ್ಗೆ ದಾಖಲೆಗಳು ಇಲ್ಲ. ಚಾಲಕನ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದ ತಿಂಗಳಿಗೆ ರೂ. 30,000/- ರಷ್ಟು ನಷ್ಟ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಯಲ್ಲ. ಈ ಬಗ್ಗೆ ದಾಖಲೆಗಳು ಇಲ್ಲ. ಕಾರ್ ಬಾಡಿಗೆ ಹೋಗುತ್ತಿದ್ದ ಬಗ್ಗೆ ದಾಖಲೆಗಳು ಇಲ್ಲ. ಕಾರ್ ಈಗ ಕೆಟ್ಟು ನಿಂತಿದೆ.

3. ನಾನು ಅರ್ಜಿಯಲ್ಲಿ ಹೇಳಿರುವಂತೆ ನನ್ನ ಕಾರಿಗೆ ಅಷ್ಟು ಜಖಂಗಳು ಆಗಿಲ್ಲ ಹಾಗೂ ರಿಪೇರಿ ವೆಚ್ಚವೂ ಆಗಿಲ್ಲ, ನನ್ನ ಕಾರಿನ ಚಾಲಕ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಪರಿಹಾರ ಪಡೆಯುವ ಸಲುವಾಗಿ ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣ ಕಂಪನಿಯಿಂದ ಪರಿಹಾರ ಪಡೆಯಲು

ನಾನ ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ